Akashvani: Bangalore
National Bulletin In Kannada
20.03.2026: 7.35AM

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

20.03.2026: 7.35AM

********

**ಮುಖ್ಯಾಂಶಗಳು:**

1. ಗಲ್ಫ್ ಪ್ರದೇಶದ ಇಂಧನ ಸ್ಥಾವರಗಳ ಮೇಲಿನ ದಾಳಿ ಬಗ್ಗೆ ಭಾರತ ಕಳವಳ; ಪರಿಣಾಮಗಳ ಬಗ್ಗೆ ಕೇಂದ್ರ ಸರ್ಕಾರ ತೀವ್ರ ನಿಗಾ
2. ಸಮಗ್ರ ರಕ್ಷಣಾ ಸಿಬ್ಬಂದಿ ಪ್ರಧಾನ ಕಚೇರಿ ಹಾಗೂ ಇಸ್ರೋದ ಬಾಹ್ಯಾಕಾಶ ಅನ್ವಯಿಕ ಕೇಂದ್ರದ ನಡುವೆ ತಿಳುವಳಿಕಾ ಒಪ್ಪಂದ
3. ರಾಷ್ಟ್ರಪತಿ ದ್ರೌಪದಿ ಮುರ್ಮು ಉತ್ತರ ಪ್ರದೇಶ ಭೇಟಿ; ವೃಂದಾವನದಲ್ಲಿಂದು ಆಂಕಾಲಜಿ ಘಟಕ ಉದ್ಘಾಟನೆ
4. ಆರ್ಲಿಯನ್ಸ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿ; ಮಹಿಳಾ ಸಿಂಗಲ್ಸ್‌ನಲ್ಲಿ ಭಾರತದ ಮೂವರು ಕ್ರೀಡಾಪಟುಗಳು ಕ್ವಾರ್ಟರ್ ಫೈನಲ್ಸ್ ಪ್ರವೇಶ
5. ೨೦೨೮ರ ವಿಶ್ವ ಒಳಾಂಗಣ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ಗೆ ಒಡಿಶಾದಲ್ಲಿ ಭಾರತ ಆತಿಥ್ಯ

*********

ಗಲ್ಫ್ ಪ್ರದೇಶದ ಇಂಧನ ಸ್ಥಾವರಗಳ ಮೇಲೆ ಇತ್ತೀಚೆಗೆ ನಡೆಯುತ್ತಿರುವ ದಾಳಿಗಳು ಆತಂಕಕಾರಿಯಾಗಿದ್ದು, ಜಾಗತಿಕ ಇಂಧನ ಭದ್ರತೆಗೆ ಧಕ್ಕೆ ತರುವ ಅಪಾಯವಿದೆ ಎಂದು ಭಾರತ ಕಳವಳ ವ್ಯಕ್ತಪಡಿಸಿದೆ. ಈ ಕುರಿತು ನವದೆಹಲಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್, ಇಂತಹ ದಾಳಿಗಳು ತಕ್ಷಣವೇ ನಿಲ್ಲಬೇಕು ಎಂದು ಆಗ್ರಹಿಸಿದರು. ಇಂಧನ ಪೂರೈಕೆ ಮತ್ತು ಹಡಗು ಸಂಚಾರ ಮಾರ್ಗಗಳ ಮೇಲಾಗುತ್ತಿರುವ ಪರಿಣಾಮಗಳ ಬಗ್ಗೆ ಸರ್ಕಾರವು ತೀವ್ರ ನಿಗಾ ಇರಿಸಿದೆ ಎಂದು ಅವರು ತಿಳಿಸಿದರು.ದೇಶದಲ್ಲಿ ಎಲ್‌ಪಿಜಿ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಸರ್ಕಾರು ಆದ್ಯತೆ ನೀಡುತ್ತಿದ್ದು, ದೇಶೀಯ ಗ್ರಾಹಕರಿಗೆ ತೊಂದರೆಯಾಗದಂತೆ ಇಂಧನ ಮೂಲಗಳನ್ನು ವೈವಿಧ್ಯಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು. ಅಫ್ಘಾನಿಸ್ತಾನದಲ್ಲಿ ಪಾಕಿಸ್ತಾನದ ವೈಮಾನಿಕ ದಾಳಿಗಳ ಕುರಿತು ಮಾತನಾಡಿದ ಅವರು, ಇಂತಹ ನಾಗರಿಕ ಮೂಲಸೌಕರ್ಯ ಮತ್ತು ಜನರಿಗೆ ತೊಂದರೆಯನ್ನುಂಟು ಮಾಡುವ ವಿಧ್ವಂಸಕ ದಾಳಿಗಳನ್ನು ಭಾರತ ಖಂಡಿಸುತ್ತದೆ. ತನ್ನ ಗೌಪ್ಯವಾದ ಪರಮಾಣು ಕಾರ್ಯಾಚರಣೆ ಹಿನ್ನೆಲೆಯಲ್ಲಿ ಪಾಕಿಸ್ತಾನ ಜಗತ್ತಿಗೆ ಒಂದು ಅಪಾಯವಾಗಿದೆ ಎಂದರು. ಶೇಕಡ ೯೦ರಷ್ಟು ಭಾರತೀಯ ನಾವಿಕರು ಜಾಗತಿಕ ವಾಣಿಜ್ಯ ನೌಕಾಯಾನ ವಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವುದಾಗಿ ಮಾಹಿತಿ ನೀಡಿದ ಅವರು, ಸದ್ಯ ಹರ್ಮುಜ್ ಜಲಸಂಧಿಯಲ್ಲಿ ೬೧೧ ನಾವಿಕರಿರುವ ೨೨ ಭಾರತೀಯ ಹಡಗುಗಳಿದ್ದು, ಸರ್ಕಾರ ಸಂಬಂಧಪಟ್ಟ ಕಂಪನಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದೆ ಎಂದು ತಿಳಿಸಿದರು. ಇರಾನ್‌ನಲ್ಲಿ ಸಿಲುಕಿರುವ ಕಾಶ್ಮೀರದ ವಿದ್ಯಾರ್ಥಿನಿಯರು ಸೇರಿದಂತೆ ಎಲ್ಲಾ ಭಾರತೀಯ ವಿದ್ಯಾರ್ಥಿಗಳ ಸುರಕ್ಷತೆಗೆ ಸರ್ಕಾರ ಬದ್ಧವಾಗಿದೆ ಎಂದ ಅವರು, ಸಂಕಷ್ಟದಲ್ಲಿರುವ ವಿದ್ಯಾರ್ಥಿಗಳಿಗೆ ರಾಯಭಾರ ಕಚೇರಿ ಸಂಪರ್ಕಿಸುವಂತೆ ತಿಳಿಸಲಾಗಿದೆ ಎಂದರು. ಚಾಬಹಾರ್ ಬಂದರಿಗೆ ಸಂಬಂಧಿಸಿದಂತೆ ಮಾತನಾಡಿದ ವಿದೇಶಾಂಗ ವಕ್ತಾರ ರಣಧೀರ್ ಜೈಸ್ವಾಲ್, ಅಮೆರಿಕ ಏಪ್ರಿಲ್ ೨೬ರ ವರೆಗೆ ನಿರ್ಬಂಧಗಳಿಂದ ತಾತ್ಕಾಲಿಕ ವಿನಾಯಿತಿ ನೀಡಿದ್ದು, ಈ

ಬೆಳವಣಿಗೆಗಳ ಪರಿಣಾಮಗಳನ್ನು ಎದುರಿಸಲು ಸರ್ಕಾರ ಎಲ್ಲಾ ಪಾಲುದಾರರೊಂದಿಗೆ ಸಮಾಲೋಚನೆ ನಡೆಸುತ್ತಿದೆ ಎಂದರು. ಎನ್‌ಐಎಯಿಂದ ಬಂಧಿತ ಆರು ಜನ ಉಕ್ರೇನಿಯರು ಮತ್ತು ಓರ್ವ ಅಮೆರಿಕ ಪ್ರಜೆ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ಇದು ಕಾನೂನು ಸಂಬಂಧಿತ ವಿಚಾರವಾಗಿದ್ದು, ತನಿಖಾ ಸಂಸ್ಥೆಗಳು ಪರಿಶೀಲನೆ ನಡೆಸುತ್ತಿವೆ ಎಂದು ಮಾಹಿತಿ ನೀಡಿದರು.

*********

ಸಮಗ್ರ ರಕ್ಷಣಾ ಸಿಬ್ಬಂದಿ ಪ್ರಧಾನ ಕಚೇರಿ ಮತ್ತು ಇಸ್ರೋದ ಬಾಹ್ಯಾಕಾಶ ಅನ್ವಯಿಕ ಕೇಂದ್ರ ತಿಳುವಳಿಕಾ ಒಪ್ಪಂದಕ್ಕೆ ಸಹಿ ಹಾಕಿದ್ದು, ಈ ಒಪ್ಪಂದ ಸಶಸ್ತ್ರ ಪಡೆಗಳಿಗಾಗಿ ಪ್ರಸ್ತುತ ಉಪಗ್ರಹ ಆಧಾರಿತ ದೂರಸಂಪರ್ಕ ಕೇಂದ್ರಗಳ ನಿರ್ವಹಣೆ ಹಾಗೂ ಹೆಚ್ಚುವರಿ ಕೇಂದ್ರಗಳನ್ನು ಒದಗಿಸುವ ಉದ್ದೇಶ ಹೊಂದಿದೆ. ಈ ಒಪ್ಪಂದಕ್ಕೆ ಸಮಗ್ರ ರಕ್ಷಣಾ ಸಿಬ್ಬಂದಿ ಉಪ ಮುಖ್ಯಸ್ಥ ಏರ್ ಮಾರ್ಷಲ್ ಶಂಕರ್ ಸುಬ್ರಹ್ಮಣಿಯನ್ ಹಾಗೂ ಬಾಹ್ಯಾಕಾಶ ಅನ್ವಯಿಕ ಕೇಂದ್ರದ ನಿರ್ದೇಶಕ ನಿಲೇಶ್ ಎಂ ದೇಸಾಯಿ ಸಹಿ ಹಾಕಿದರು. ಉಭಯ ಸಂಸ್ಥೆಗಳು, ಪ್ರಸ್ತುತ ಟೆಲಿಮೆಡಿಸಿನ್ ಮೂಲಸೌಕರ್ಯವನ್ನು ಪರಿಶೀಲಿಸಿ, ಮುಂದಿನ ತಲೆಮಾರಿನ ಟೆಲಿಮೆಡಿಸಿನ್ ಕೇಂದ್ರಗಳ ಅಭಿವೃದ್ಧಿಗೆ ಮಾರ್ಗಸೂಚಿ ಕುರಿತು ಚರ್ಚೆ ನಡೆಸಿವೆ ಎಂದು ರಕ್ಷಣಾ ಸಚಿವಾಲಯ ಸಾಮಾಜಿಕ ಮಾಧ್ಯಮದ ಮೂಲಕ ತಿಳಿಸಿದೆ.

*********

ಮೂರು ದಿನಗಳ ಉತ್ತರ ಪ್ರದೇಶ ಪ್ರವಾಸದಲ್ಲಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಇಂದು ವೃಂದಾವನದಲ್ಲಿರುವ ರಾಮಕೃಷ್ಣ ಮಿಷನ್ ಸೇವಾಶ್ರಮದ ನಂದ ಕಿಶೋರ್ ಸೋಮಾನಿ ಆಂಕಾಲಜಿ ಘಟಕವನ್ನು ಉದ್ಘಾಟಿಸಲಿದ್ದಾರೆ. ಬಳಿಕ ಅವರು, ಉದಿಯಾ ಬಾಬಾ ಆಶ್ರಮ, ದಾವಣಾಲ್ ಕುಂಡ್ ಹಾಗೂ ನೀಬ್ ಕರೋರಿ ಬಾಬಾ ಸಮಾಧಿಗೆ ಭೇಟಿ ನೀಡಲಿದ್ದಾರೆ. ನಿನ್ನೆ ರಾಷ್ಟ್ರಪತಿ ಪ್ರೇಮ್ ಮಂದಿರ ಮತ್ತು ಇಸ್ಕಾನ್ ದೇವಸ್ಥಾನಗಳಲ್ಲಿ ಪೂಜೆ ನೆರವೇರಿಸಿ, ಪ್ರಾರ್ಥನೆ ಸಲ್ಲಿಸಿದರು. ಈ ವೇಳೆ ರಾಜ್ಯಪಾಲರಾದ ಆನಂದಿಬೆನ್ ಪಟೇಲ್ ಉಪಸ್ಥಿತರಿದ್ದರು. ಇದರ ಜೊತೆಗೆ ರಾಷ್ಟ್ರಪತಿ ಅಯೋಧ್ಯೆಯ ಶ್ರೀರಾಮ ಜನ್ಮಭೂಮಿ ಮಂದಿರದಲ್ಲಿ ದರ್ಶನ ಪಡೆದು, ಶ್ರೀರಾಮ ಯಂತ್ರ ಸ್ಥಾಪನಾ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

*********

ಪ್ರಧಾನಿ ನರೇಂದ್ರ ಮೋದಿ ನಿನ್ನೆ ಕತಾರ್‌ನ ಅಮೀರ್ ಶೇಖ್ ತಮೀಮ್ ಬಿನ್ ಹಮದ್ ಅಲ್‌ತಾನಿ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿ ಅವರಿಗೆ ಹಾಗೂ ಕತಾರ್‌ನ ಜನತೆಗೆ ಈದ್ ಹಬ್ಬದ ಶುಭಾಶಯ ಕೋರಿದರು. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ಗಲ್ಫ್ ವಲಯದ ಇಂಧನ ಮೂಲಸೌಕರ್ಯಗಳ ಮೇಲೆ ನಡೆಯುತ್ತಿರುವ ದಾಳಿಗಳನ್ನು ಖಂಡಿಸಿದ್ದು, ಈ ಸಂಕಷ್ಟದ ಸಮಯದಲ್ಲಿ ಭಾರತ ಕತಾರ್‌ನೊಂದಿಗೆ ದೃಢವಾಗಿ ನಿಲ್ಲಲಿದೆ ಎಂದು ಪುನರುಚ್ಚರಿಸಿದ್ದಾರೆ. ಕತಾರ್‌ನಲ್ಲಿರುವ ಭಾರತೀಯ ಸಮುದಾಯಕ್ಕೆ ಅಲ್ಲಿನ ಸರ್ಕಾರ ನೀಡುತ್ತಿರುವ ಬೆಂಬಲ ಹಾಗೂ ಕಾಳಜಿಗಾಗಿ ಕೃತಜ್ಞತೆ ಸಲ್ಲಿಸಿದ ಪ್ರಧಾನಿ, ಪಶ್ಚಿಮ ಏಷ್ಯಾದಲ್ಲಿ ಶಾಂತಿ ಮತ್ತು ಸ್ಥಿರತೆ ನೆಲೆಸಲಿ ಎಂದು ಆಶಿಸಿದರು.

*********

ಪ್ರಧಾನಮಂತ್ರಿ ನರೇಂದ್ರ ಮೋದಿ, ನಿನ್ನೆ ನವದೆಹಲಿಯಲ್ಲಿ ಇಂದಿರಾ ಗಾಂಧಿ ರಾಷ್ಟ್ರೀಯ ಕಲಾ ಕೇಂದ್ರದ ವಿಶ್ವಸ್ಥರನ್ನು ಭೇಟಿ ಮಾಡಿ, ದೇಶದ ವೈವಿಧ್ಯಮಯ ಸಂಸ್ಕೃತಿಯನ್ನು ಇನ್ನಷ್ಟು ಜನಪ್ರಿಯಗೊಳಿಸುವ ವಿವಿಧ ಅಂಶಗಳ ಕುರಿತು ಚರ್ಚಿಸಿದರು.ಈ

ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ಈ ಪ್ರಯತ್ನದಲ್ಲಿ ಹೆಚ್ಚಿನ ಜನರನ್ನು ಒಳಗೊಳ್ಳುವ ಮಾರ್ಗಗಳು, ಡಿಜಿಟಲ್ ಹಾಗೂ ತಳಮಟ್ಟದ ಉಪಕ್ರಮಗಳ ಮೂಲಕ ವ್ಯಾಪ್ತಿಯನ್ನು ವಿಸ್ತರಿಸುವುದು ಮತ್ತು ಕಲಾವಿದರು ಹಾಗೂ ವಿದ್ವಾಂಸರನ್ನು ಬೆಂಬಲಿಸಿ ದೇಶದ ಸಮೃದ್ಧ ಪರಂಪರೆಯನ್ನು ಸಂರಕ್ಷಿಸಿ ಉತ್ತೇಜಿಸುವ ವಿಷಯಗಳನ್ನೂ ಚರ್ಚಿಸಲಾಗಿದೆ ಎಂದು ತಿಳಿಸಿದ್ದಾರೆ.

*********

ಪಶ್ಚಿಮ ಏಷ್ಯಾದಲ್ಲಿನ ಇತ್ತೀಚಿನ ಬೆಳವಣಿಗೆಗಳ ನಡುವೆಯೇ ೨೦೨೬ರ ಮುಂಗಾರು ಋತುವಿಗೆ ಮುಂಚಿತವಾಗಿ ರಸಗೊಬ್ಬರ ಲಭ್ಯತೆಯನ್ನು ಸ್ಥಿರಗೊಳಿಸಲು ಮತ್ತು ಹೆಚ್ಚಿಸಲು ಭಾರತ ಸರ್ಕಾರವು ಬಹು-ಹಂತದ ಕಾರ್ಯತಂತ್ರವನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಿದೆ. ದೇಶೀಯ ಉತ್ಪಾದನೆ ಹೆಚ್ಚಳ ಮತ್ತು ಅತ್ಯಾಧುನಿಕ ಜಾಗತಿಕ ಖರೀದಿ ತಂತ್ರದ ಸಂಯೋಜನೆಯ ಮೂಲಕ ರಸಗೊಬ್ಬರ ಇಲಾಖೆಯು ಜಾಗತಿಕ ಪೂರೈಕೆ ಸರಣಿ ವ್ಯತ್ಯಯಗಳಿಂದ ಭಾರತೀಯ ರೈತರನ್ನು ರಕ್ಷಿಸಲು ಮುಂದಾಗಿದೆ.ನೈಸರ್ಗಿಕ ಅನಿಲಕ್ಕಾಗಿ ಸರ್ಕಾರ ಇಪಿಎಂಸಿ ಬಿಡ್ಡಿಂಗ್ ಅನ್ನು ಯಶಸ್ವಿಯಾಗಿ ಮುಕ್ತಾಯಗೊಳಿಸಿದೆ. ಇದರಿಂದಾಗಿ ಹೆಚ್ಚುವರಿ ಅನಿಲವನ್ನು ಪಡೆಯುವ ಮೂಲಕ ಯೂರಿಯಾ ಸ್ಥಾವರಗಳಿಗೆ ಒಟ್ಟು ಪೂರೈಕೆಯು ಶೇಕಡ ೨೩ ರಷ್ಟು ಏರಿಕೆಯಾಗಿದೆ. ಇದು  ನಿರ್ಣಾಯಕವಾಗಿ ಸ್ಥಾವರಗಳ ಅನಿಲ ಅಗತ್ಯ ಪೂರೈಕೆಯನ್ನು ಅವುಗಳ ಸರಾಸರಿ ಅಗತ್ಯಗಳ ಶೇಕಡ ೭೬ ಕ್ಕೆ ಹೆಚ್ಚಿಸುತ್ತದೆ, ಇದು ಹಿಂದಿನ ಶೇಕಡ ೬೨ಕ್ಕಿಂತ ಗಮನಾರ್ಹವಾಗಿ ಹೆಚ್ಚಾಗಿದೆ.ಒಟ್ಟು ಯೂರಿಯಾ ದಾಸ್ತಾನು ಪ್ರಸ್ತುತ ೬೧.೧೪ ಲಕ್ಷ ಮೆಟ್ರಿಕ್ ಟನ್‌ನಷ್ಟಿದ್ದು, ಇದು ಮಾರ್ಚ್ ೨೦೨೫ರಲ್ಲಿ ೫೫.೨೨ ಲಕ್ಷ ಮೆಟ್ರಿಕ್ ಟನ್‌ಗಿಂತ ಹೆಚ್ಚಿದೆ.

*********

ಬ್ರಿಟನ್, ಫ್ರಾನ್ಸ್, ಜರ್ಮನಿ, ಇಟಲಿ, ನೆದರ್‌ಲ್ಯಾಂಡ್ಸ್ ಮತ್ತು ಜಪಾನ್ ದೇಶಗಳು ಹರ್ಮುಜ್  ಜಲಸಂಧಿಯ ಮೂಲಕ ಸುರಕ್ಷಿತ ಸಂಚಾರವನ್ನು ಖಚಿತಪಡಿಸಲು ಸೂಕ್ತ ಪ್ರಯತ್ನಗಳಲ್ಲಿ ಭಾಗವಹಿಸಲು ಒಪ್ಪಿಕೊಂಡಿವೆ. ಜೊತೆಗೆ, ಇಂಧನ ಮಾರುಕಟ್ಟೆಗಳನ್ನು ಸ್ಥಿರಗೊಳಿಸಲು ಕ್ರಮಗಳನ್ನು ಕೈಗೊಳ್ಳುವುದಾಗಿ ತಿಳಿಸಿವೆ. ಬ್ರಿಟನ್ ಪ್ರಧಾನಮಂತ್ರಿ ಕೀರ್ ಸ್ಟಾರ್ಮರ್ ಕಚೇರಿಯಿಂದ ಹೊರಡಿಸಲಾದ ಜಂಟಿ ಪ್ರಕಟಣೆಯಲ್ಲಿ, ಈ ದೇಶಗಳ ನಾಯಕರು ಇರಾನ್ ನಡೆಸಿದ ದಾಳಿಗಳನ್ನು ಖಂಡಿಸಿ, ತಕ್ಷಣವೇ ತನ್ನ ಕ್ರಮಗಳನ್ನು ನಿಲ್ಲಿಸಲು ಕರೆ ನೀಡಿದ್ದಾರೆ. ವಾಣಿಜ್ಯ ನೌಕಾಯಾನವನ್ನು ತಡೆಯಲು ಇರಾನ್ ನೀಡುತ್ತಿರುವ ಬೆದರಿಕೆಗಳು, ಸಮುದ್ರದಲ್ಲಿ ಸ್ಫೋಟಕಗಳನ್ನು ಇಡುವುದು, ಡ್ರೋನ್ ಮತ್ತು ಕ್ಷಿಪಣಿ ದಾಳಿಗಳು ಸೇರಿದಂತೆ ಎಲ್ಲಾ ಕ್ರಮಗಳನ್ನು ತಕ್ಷಣ ನಿಲ್ಲಿಸಲು ಒತ್ತಾಯಿಸಿದ್ದಾರೆ.

*********

ಕೇರಳದಲ್ಲಿ ಮುಂಬರುವ ವಿಧಾನಸಭಾ ಚುನಾವಣೆಗಾಗಿ ಕಾಂಗ್ರೆಸ್ ಪಕ್ಷ ೩೭ ಅಭ್ಯರ್ಥಿಗಳ ತನ್ನ ಎರಡನೇ ಪಟ್ಟಿಯನ್ನು ಪ್ರಕಟಿಸಿದೆ. ಈ ಪಟ್ಟಿಯ ಪ್ರಕಾರ  ಹಿರಿಯ ಕಾಂಗ್ರೆಸ್ ನಾಯಕ ವಿ.ಎಸ್. ಶಿವಕುಮಾರ್ ಅರುವಿಕ್ಕರ ಕ್ಷೇತ್ರದಿಂದ ಕಣಕ್ಕಿಳಿಯುತ್ತಿದ್ದರೆ, ಮಾಜಿ ಶಾಸಕ ಕೆ.ಎಸ್. ಸಬರಿನಾಥನ್ ನೇಮಮ್ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದಾರೆ. ಸಂದೀಪ್ ವಾರಿಯರ್ ತ್ರಿಕರಿಪುರ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದರೆ, ಕೊಚ್ಚಿಯಿಂದ ಮೊಹಮ್ಮದ್ ಶಿಯಾಜ್ ಕಣಕ್ಕಿಳಿಯುತ್ತಿದ್ದಾರೆ. ಇದಕ್ಕೂ ಮುನ್ನ ಮೊದಲ ಪಟ್ಟಿಯಲ್ಲಿ ಕಾಂಗ್ರೆಸ್ ಪಕ್ಷ ೫೫ ಅಭ್ಯರ್ಥಿಗಳನ್ನು ಘೋಷಿಸಿತ್ತು. ಕೇರಳ ವಿಧಾನಸಭೆಯ ಎಲ್ಲಾ ಸ್ಥಾನಗಳಿಗೆ ಮುಂದಿನ ತಿಂಗಳು ೯ ರಂದು ಮತದಾನ ನಡೆಯಲಿದ್ದು, ಮೇ ೪ ರಂದು ಫಲಿತಾಂಶ ಪ್ರಕಟವಾಗಲಿದೆ.

*********

ಫ್ರಾನ್ಸ್‌ನಲ್ಲಿ ನಡೆಯುತ್ತಿರುವ ಆರ್ಲಿಯನ್ಸ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ತನ್ವಿ ಶರ್ಮಾ, ಇಶಾರಾಣಿ ಬರುವಾಹ್ ಮತ್ತು ಮಾಳವಿಕಾ ಬನ್ಸೋದ್, ಮಹಿಳಾ ಸಿಂಗಲ್ಸ್ ಕ್ವಾರ್ಟರ್ ಫೈನಲ್ಸ್ ಪ್ರವೇಶಿಸಿದ್ದರೆ. ನಿನ್ನೆ ನಡೆದ ಮಹಿಳಾ ಸಿಂಗಲ್ಸ್ ವಿಭಾಗದ ೧೬ನೇ ಸುತ್ತಿನ ಪಂದ್ಯದಲ್ಲಿ ತನ್ವೀ ಶರ್ಮಾ, ಭಾರತದವರೇ ಆದ ಅನ್ಮೋಲ್ ಖಾರ್ಬ್ ಅವರನ್ನು ೨೧-೧೪, ೨೧-೧೭ ಸೆಟ್‌ಗಳ ಅಂತರದಲ್ಲಿ ಮಣಿಸಿದರೆ, ಇಶಾರಾಣಿ, ಕೆನಡಾದ ವೆನ್ ಯು ಜಾಂಗ್ ವಿರುದ್ಧ ಗೆಲುವು ದಾಖಲಿಸಿದರು. ೧೬ರ ಸುತ್ತಿನ ಮತ್ತೊಂದು ಪಂದ್ಯದಲ್ಲಿ ಮಾಳವಿಕಾ ಬನ್ಸೋದ್, ಮಲೇಷ್ಯಾದ ವಾಂಗ್ ಲಿಂಗ್ ಚಿಂಗ್ ವಿರುದ್ಧ ೨೪-೨೨, ೨೧-೧೩ ಸೆಟ್‌ಗಳ ಅಂತರದಲ್ಲಿ ಜಯ ಸಾಧಿಸಿದರು. ಪುರುಷರ ಡಬಲ್ಸ್ ವಿಭಾಗದಲ್ಲಿ ಭಾರತದ ಎಂ.ಆರ್. ಅರ್ಜುನ್ ಮತ್ತು ಹರಿಹರನ್ ಅಂಸ ಕರುಣನ್ ಜೋಡಿ, ಸ್ಕಾಟ್‌ಲ್ಯಾಂಡ್ ಜೋಡಿಯನ್ನು ಮಣಿಸಿ, ಕ್ವಾರ್ಟರ್ ಫೈನಲ್ಸ್ ತಲುಪಿದರೆ, ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಆಯುಷ್ ಶೆಟ್ಟಿ, ಜಪಾನ್‌ನ ಯುದಾಯಿ ಒಕಿಮೊತೊ ವಿರುದ್ಧ ಪರಾಭವಗೊಂಡರು.

********

೨೦೨೮ರಲ್ಲಿ ಭಾರತ ಮೊದಲ ಬಾರಿಗೆ ಒಡಿಶಾದ ಭುವನೇಶ್ವರದ ಕಳಿಂಗ ಕ್ರೀಡಾ ಸಂಕೀರ್ಣದಲ್ಲಿ ವಿಶ್ವ ಒಳಾಂಗಣ ಅಥ್ಲೆಟಿಕ್ ಚಾಂಪಿಯನ್‌ಶಿಪ್‌ಅನ್ನು ಆಯೋಜಿಸಲಿದೆ. ಪೋಲ್ಯಾಂಡ್‌ನ ಟೊರುನ್‌ನಲ್ಲಿ ನಡೆದ ವಿಶ್ವ ಅಥ್ಲೆಟಿಕ್ಸ್ ಮಂಡಳಿ ಸಭೆಯಲ್ಲಿ ನಿನ್ನೆ ಭಾರತಕ್ಕೆ ಪ್ರತಿಷ್ಠಿತ ಕ್ರೀಡಾಕೂಟದ ಆತಿಥ್ಯದ ಹಕ್ಕುಗಳನ್ನು ನೀಡಿಲಾಯಿತು. ಭಾರತೀಯ ಅಥ್ಲೆಟಿಕ್ಸ್ ಒಕ್ಕೂಟದ ಅಧ್ಯಕ್ಷ ಬಹದ್ದೂರ್ ಸಿಂಗ್ ಸಗೂ, ಈ ಬೆಳವಣಿಗೆಯನ್ನು ಶ್ಲಾಘಿಸಿದ್ದು, ಇದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತೀಯ ಅಥ್ಲೆಟಿಕ್ಸ್‌ನ ಬೆಳೆಯುತ್ತಿರುವ ಶಕ್ತಿಯ ಪ್ರತೀಕವಾಗಿದೆ ಎಂದು ಬಣ್ಣಿಸಿದ್ದಾರೆ. ಈ ನಡುವೆ, ಪ್ರಸಕ್ತ ೨೦೨೬ರ ವಿಶ್ವ ಒಳಾಂಗಣ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ಇಂದಿನಿಂದ ಪೋಲ್ಯಾಂಡ್‌ನ ಟೊರುನ್‌ನಲ್ಲಿ ಆರಂಭಗೊಳ್ಳಲಿದೆ.

*****END****